# ವರ್ಷದ ಆಟಗಾರ

‘2015ರ ಅತ್ಯುತ್ತಮ ಕ್ರೀಡಾಪಟು ಯಾರು?’ ಎನ್ನುವ ಪ್ರಶ್ನೆಗೆ ವರ್ಷದ ಕೊನೆಗೆ ಸಿಕ್ಕಿರುವ ಉತ್ತರ– ನೊವಾಕ್ ಜೊಕೊವಿಕ್. ‘ಇದುವರೆಗೆ ಟೆನಿಸ್ ಜಗತ್ತಿನಲ್ಲಿ ಬಂದಿರುವ ಎಲ್ಲ ಟೆನಿಸ್ ಆಟಗಾರರ ಪಟ್ಟಿ ಮಾಡಿದರೂ ಅದರಲ್ಲಿ ಜೊಕೊವಿಕ್ ಸಾರ್ವಕಾಲಿಕ ಶ್ರೇಷ್ಠ ಆಟಗಾರ’ ಎನ್ನುವವರೂ ಇದ್ದಾರೆ. ಜೊಕೊವಿಕ್ ಸಾಧನೆಗಿಂತ ಹೆಚ್ಚಾಗಿ ಆತನ ಆಟದ ಶೈಲಿಗೆ ಈ ಮಾತು ಅನ್ವಯಿಸುತ್ತದೆ. ಸರ್ಬಿಯಾದ, 28ರ ಹರೆಯದ (ಬರ್ತ್‌ಡೇ 22/5/1987) ಈ ಸುಂದರಾಂಗ, ಟೆನಿಸ್ ಕೋರ್ಟ್‌ನಲ್ಲಿ ಪಾದರಸದಂತೆ ಓಡಾಡುತ್ತಾ ಎದುರಾಳಿಗಳನ್ನು ಕೆರಳಿಸುತ್ತಾ ತಣ್ಣಗೆ ವಿಜಯವನ್ನು ದಾಖಲಿಸುವುದು ವೀಕ್ಷಕರ ಕಣ್ಣಿಗೆ ಹಬ್ಬವೇ. ರಫಾ ನಾಡಾಲ್ ಮತ್ತು ರೋಜರ್ ಫೆಡರರ್ ಎಂಬ ಇಬ್ಬರು ದೈತ್ಯ ಚಾಂಪಿಯನ್ನರ ಪಾರಮ್ಯದ ಕಾಲದಲ್ಲಿ ಮೇಲೆದ್ದ ಜೊಕೊವಿಕ್, ಇಬ್ಬರ ಜತೆಗೂ ಸೆಣಸಾಡುತ್ತಾ ಈಗ ಎಟಿಪಿ ರ‍್ಯಾಂಕಿಂಗ್‌ನಲ್ಲಿ ‘ವಿಶ್ವದ ನಂಬರ್ ಒನ್ ಆಟಗಾರ’ನಾಗಿ ಹೊರಹೊಮ್ಮಿರುವುದು ನಿಜಕ್ಕೂ ಅದ್ಭುತವೇ. ಈವರೆಗೆ 10 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ಬಗಲಿಗೆ ಏರಿಸಿಕೊಂಡಿರುವ (ಆಸ್ಟ್ರೇಲಿಯನ್ ಓಪನ್ 5, ವಿಂಬಲ್ಡನ್ 3 ಮತ್ತು ಯುಎಸ್ ಓಪನ್ 2) ಜೊಕೊವಿಕ್, ಈಗಿನ ಪರಿಸ್ಥಿತಿ ನೋಡಿದರೆ ಇನ್ನೂ ಏಳೆಂಟು ಗ್ರ್ಯಾನ್‌ಸ್ಲಾಮ್‌ಗಳನ್ನು ಗೆಲ್ಲುವುದರಲ್ಲಿ ಸಂಶಯವಿಲ್ಲ.

ರೋಜರ್ ಫೆಡರರ್, ರಫಾ ನಾಡಾಲ್ ಮತ್ತು ಜೊಕೊವಿಕ್ ನಡುವಣ ಹೋಲಿಕೆ ಹಲವು ಸ್ವಾರಸ್ಯಕರ ಸಂಗತಿಗಳನ್ನು ಹೊರಗೆಡವುತ್ತದೆ. ಫೆಡರರ್ ಈಗಾಗಲೆ 17 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ಗೆದ್ದಿದ್ದರೆ, ನಾಡಾಲ್ 14 ಗ್ರ್ಯಾನ್‌ಸ್ಲಾಮ್‌ಗಳನ್ನು ಗೆದ್ದಿದ್ದಾರೆ. ಇವರಿಬ್ಬರಿಗೂ ಹೋಲಿಸಿದರೆ ಜೊಕೊವಿಕ್ ಇನ್ನೂ ಜೂನಿಯರ್. ಆದರೆ ಈ ಇಬ್ಬರು ದೈತ್ಯರ ಜತೆಗಿನ ಕಾಳಗದಲ್ಲಿ ಜೊಕೊವಿಕ್ ಎಂದೂ ಹಿಂದೆ ಬಿದ್ದಿಲ್ಲ ಎನ್ನುವುದು ಕುತೂಹಲಕರ. ನಾಡಾಲ್ ಜತೆಗೆ ಜೊಕೊವಿಕ್ ಈವರೆಗೆ 46 ಸಲ ಮುಖಾಮುಖಿಯಾಗಿದ್ದು ಅದರಲ್ಲಿ 23–23 ಸಮಬಲದ ಗೆಲುವು ಸಾಧಿಸಿದ್ದಾರೆ. ಹಾಗೆಯೇ ಫೆಡರರ್ ಜತೆಗೆ 44 ಸಲ ಮುಖಾಮುಖಿಯಾಗಿದ್ದು ಅದರಲ್ಲೂ 22–22 ಸಮಬಲದ ಗೆಲುವು ಸಾಧಿಸಿದ್ದಾರೆ. ಅಂದರೆ ಪೈಪೋಟಿ ಎಷ್ಟು ಕಠಿಣವಾಗಿತ್ತು ಎನ್ನುವುದನ್ನು ಗುರುತಿಸಬಹುದು. 10 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳಲ್ಲಿ ಈ ವರ್ಷವೇ 3 ಪ್ರಶಸ್ತಿಗಳನ್ನು ಗೆದ್ದಿರುವುದರಿಂದ 2016 ಕೂಡಾ ಜೊಕೊವಿಕ್ ವರ್ಷವೇ ಎನ್ನಲಡ್ಡಿಯಿಲ್ಲ.

4ರ ಎಳವೆಯಲ್ಲೇ ಟೆನಿಸ್ ರ‍್ಯಾಕೆಟ್ ಕೈಹಿಡಿದಾತ ಜೊಕೊವಿಕ್. ಆತನ ಇಬ್ಬರು ಅಣ್ಣಂದಿರೂ ಟೆನಿಸ್ ಆಟಗಾರರೇ. ಎಳವೆಯಲ್ಲೇ ಈತನ ಆಟ ನೋಡಿ ಮೆಚ್ಚಿದ ಸ್ಲೊವಾಕಿಯಾದ ಕೋಚ್ ಮರಿಯನ್ ವಾಜ್ದಾ ಆರಂಭಿಕ ಪಟ್ಟುಗಳನ್ನು ಕಲಿಸಿದರು. ಗೆಲ್ಲುತ್ತಾ ಸೋಲುತ್ತಾ ಬೆಳೆದ ಜೊಕೊವಿಕ್ 2013ರಲ್ಲಿ ಬೋರಿಸ್ ಬೆಕರ್‌ರನ್ನು ಕೋಚ್ ಆಗಿ ಆಯ್ಕೆ ಮಾಡಿಕೊಂಡದ್ದು ಹೆಚ್ಚು ಫಲ ನೀಡಿತು. ಟೆನಿಸ್ ರಂಗದ ಸರ್ವಶ್ರೇಷ್ಠ ಆಟಗಾರರಲ್ಲಿ ಒಬ್ಬರಾಗಿರುವ, 6 ಗ್ರ್ಯಾಂಡ್‌ಸ್ಲಾಮ್ ಪ್ರಶಸ್ತಿಗಳನ್ನು ಗೆದ್ದಿರುವ ಬೆಕರ್‌ರ ಕಠಿಣ ತರಬೇತಿ, ಜೊಕೊವಿಕ್ ಆಟಕ್ಕೆ ಹೊಸ ಕಳೆ ನೀಡಿತು.

ಫೆಡರರ್ ಬಲಶಾಲಿ ಮುಂಗೈ ಹೊಡೆತಗಳಿಗೆ ಹೆಸರುವಾಸಿಯಾಗಿದ್ದರೆ, ನಾಡಾಲ್‌ನ ಸರ್ವ್‌ಗಳ ಟಾಪ್‌ಸ್ಪಿನ್ ಎದುರಿಸುವುದು ಬಲುಕಷ್ಟ. ಆದರೆ ಜೊಕೊವಿಕ್ ಹೆಚ್ಚುಗಾರಿಕೆ ಎಂದರೆ, ಜಗತ್ತಿನ ಎಷ್ಟೇ ಬಲಶಾಲಿ ಆಟಗಾರರಿದ್ದರೂ ಅವರ ಸರ್ವ್‌ಗಳನ್ನು ಹಿಂದಿರುಗಿಸುವ ಚಾಕಚಕ್ಯತೆ. ಮೊದಲಿನ ಇಬ್ಬರು ಆಕ್ರಮಣಕ್ಕೆ ಹೆಸರುವಾಸಿ. ಜೊಕೊವಿಕ್ ತಣ್ಣಗೆ ಪಾದರಸದಂತೆ ಕೋರ್ಟ್‌ಡೀ ಓಡಾಡುತ್ತಾ ಎದುರಾಳಿಗಳನ್ನು ಕೆರಳಿಸಿ ತಪ್ಪು ಮಾಡಿಸುವುದೇ ಜಾಸ್ತಿ. ಬೇಸ್‌ಲೈನ್ ನಲ್ಲಿ ಆಕ್ರಮಣಕಾರಿ ಆಟ ತೋರುವ ಜೊಕೊವಿಕ್, ರಕ್ಷಣಾತ್ಮಕ ಹೊಡೆತಗಳನ್ನೇ ಹೆಚ್ಚು ನೆಚ್ಚಿಕೊಳ್ಳುವವರು. ಹಾಗೆಂದೇ ಎಟಿಪಿ ಟೂರ್ ಪಂದ್ಯಗಳಲ್ಲಿ ಸತತ 31 ವಿಜಯಗಳನ್ನು ದಾಖಲಿಸಲು ಸಾಧ್ಯವಾಗಿದ್ದು.

ಜೊಕೊವಿಕ್ ವೃತ್ತಿಜೀವನದ ಸ್ವಾರಸ್ಯಕರ ಅಂಶವೆಂದರೆ ಡಯಟ್‌ನಲ್ಲಿ ಬದಲಾವಣೆ ಮಾಡಿಕೊಂಡ ನಂತರ ಆಟದಲ್ಲಿ ಸುಧಾರಣೆಯಾದದ್ದು. ಅಪ್ಪ–ಅಮ್ಮ ನಡೆಸುತ್ತಿದ್ದ ರೆಸ್ಟೋರೆಂಟ್‌ನಲ್ಲಿ ಪಿಜ್ಜಾ ಮತ್ತು ಕೇಕ್‌ಗಳು ಜನಪ್ರಿಯ. ಅವುಗಳನ್ನು ತಿಂದೇ ಬೆಳೆದ ಜೊಕೊವಿಕ್ ಕೋರ್ಟ್‌ನಲ್ಲಿ ಪದೇ ಪದೇ ಹಲವು ತಪ್ಪುಗಳನ್ನು ಮಾಡುತ್ತಿದ್ದುದನ್ನು ಗಮನಿಸಿದ ಕೋಚ್, ಊಟ–ತಿಂಡಿಯ ಹೊಸ ಪಟ್ಟಿ ನೀಡಿದರು! ಈಗ ಜೊಕೊವಿಕ್ ವರ್ಜ್ಯಗಳ ಪಟ್ಟಿ ದೊಡ್ಡದೇ ಇದೆ. ಬಾಲ್ಯದಲ್ಲೇ ಅಸ್ತಮಾ ಹೊಂದಿದ್ದ ಜೊಕೊವಿಕ್ ಈ ಮೆನು ಬದಲಾವಣೆಯ ಬಳಿಕ ಆರೋಗ್ಯದಲ್ಲೂ ಸ್ಥಿರತೆ ಸಾಧಿಸಿದ! ಟೆನಿಸ್ ಕೋರ್ಟ್‌ನಲ್ಲಿ ಗಂಭೀರ ಆಟಗಾರನಾಗಿರುವ ಈತ, ಹೊರಗೆ ಅಷ್ಟೇ ಕುಶಾಲಿನ ಮನುಷ್ಯ! ಹಾಗೆಂದೇ ‘ಲೇಟ್‌ನೈಟ್ ಟಿವಿ ಷೋ’ಗಳಲ್ಲಿ ಅತ್ಯಂತ ಜನಪ್ರಿಯ. ಹಾಡುಗಳನ್ನೂ ಹಾಡಿದ್ದಾನೆ. ಸ್ನೇಹಿತರ ಜತೆ ಸೇರಿ ಮ್ಯೂಸಿಕ್ ಆಲ್ಬಂ ಕೂಡಾ ಹೊರತಂದಿದ್ದಾನೆ. ಜಾಹೀರಾತು ಪ್ರಪಂಚದಲ್ಲೂ ಈತನಿಗೆ ಫೆಡರರ್, ರಫಾ ಮತ್ತು ಮುರ್ರೆ ಎದುರಾಳಿಗಳು. ಆರಂಭದಲ್ಲಿ ಟೆಲಿಕಾಂ ಸರ್ಬಿಜಾ ಮತ್ತು ಜರ್ಮನಿಯ ಫಿಟ್‌ಲೈನ್ ಕಂಪೆನಿಗಳಿಗೆ ರಾಯಭಾರಿ ಆಗಿದ್ದ ಜೊಕೊವಿಕ್, ಈಗ ಹತ್ತಾರು ಕಂಪೆನಿಗಳ ಅಚ್ಚುಮೆಚ್ಚಿನ ಜಾಹೀರಾತು ಮುಖ. ಅಡಿಡಾಸ್ ಶೂಗಳು ಮತ್ತು ಸರ್ಗಿಯಾ ಟಾಚಿನಿ ಬಟ್ಟೆಬರೆಗಳಲ್ಲಿ ಈಗಲೂ ಈತ ಜನಪ್ರಿಯ. ನೊವಾಕ್ ಕೆಫೆಗಳು, ರಿಯಲ್ ಎಸ್ಟೇಟ್ ಮತ್ತು ಸ್ವಂತ ಬ್ರ್ಯಾಂಡ್‌ನ ಬಟ್ಟೆಬರೆಗಳ ವ್ಯಾಪಾರ ಜೋರಾಗಿದೆ. ಎಳೆಯ ಮಕ್ಕಳ ಪುನರ್ವಸತಿಗಾಗಿ ಸೇವಾ ಪ್ರತಿಷ್ಠಾನ ಸ್ಥಾಪಿಸಿರುವ ಜೊಕೊವಿಕ್, ಯೂನಿಸೆಫ್‌ನ ಸೌಹಾರ್ದ ರಾಯಭಾರಿಯೂ ಹೌದು. ■



Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65